
## ವಿದಾನಸೌಧದ ಪಶ್ಚಿಮಭಾಗದ ಮುಂಭಾಗದ ವೃತ್ತಕ್ಕೆ ಮಾಜಿ ಮುಖ್ಯಮಂತ್ರಿ
## ಡಾ.ಎಸ್.ನಿಜಲಿಂಗಪ್ಪ ವೃತ್ತ ನಾಮಕರಣ ಉದ್ಘಾಟನೆಗೆ ಮುಖ್ಯಮಂತ್ರಿಗಳ ನಿರ್ದೇಶನ

# ಸಭಾಪತಿ ಬಸವರಾಜ ಹೊರಟ್ಟಿ ಅಭಿನಂದನೆ

**ಧಾರವಾಡ:** ವಿಳಂಬವಾದ "ಡಾ ಎಸ್.ನಿಜಲಿಂಗಪ್ಪ ವೃತ್ತ" ನಾಮಕರಣ ಉದ್ಘಾಟನಾ ಸಮಾರಂಭವನ್ನು ತಕ್ಷಣ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ನಿರ್ದೇಶನ ನೀಡಿದ್ದಕ್ಕೆ ಸಭಾಪತಿ ಬಸವರಾಜ ಹೊರಟ್ಟಿಯವರು ಅಭಿನಂದನೆ ಸಲ್ಲಿಸಿದ್ದಾರೆ.




ನಾಡು ಕಂಡ ಅಪರೂಪದ ಮುಖ್ಯಮಂತ್ರಿಗಳು ಮತ್ಸದ್ದಿ ರಾಜಕಾರಣಿಗಳು ಸರಳ ಸಜ್ಜನಿಕೆಗೆ ಹೆಸರಾದ ಡಾ.ಎಸ್.ನಿಜಲಿಂಗಪ್ಪನವರ ಸೇವೆಯನ್ನು ನಾಡು ಎಂದೂ ಮರೆಯದು ಇಂತಹ ಮಹನೀಯರ ಹೆಸರು ಚಿರಸ್ಥಾಯಿಯಾಗಿ ಉಳಿಸಲು ಬೆಂಗಳೂರಿನ ಬಿ.ಬಿ.ಎಂ.ಪಿ. ವಾರ್ಡನಂ. 110ರ ಸಂಪಂಗಿರಾಮ ನಗರ ವ್ಯಾಪ್ತಿಗೆ ಬರುವ ವಿಧಾನ ಸೌಧದ ಪಶ್ಚಿಮ ಭಾಗದ ಮುಂಭಾಗದಲ್ಲಿರುವ ವೃತ್ತಕ್ಕೆ ಕರ್ನಾಟಕ ಏಕೀಕರಣ ಶಿಲ್ಪಿ ಮಾಜಿ ಮುಖ್ಯಮಂತ್ರಿ ಡಾ.ಎಸ್.ನಿಜಲಿಂಗಪ್ಪ ಇವರ ಸಂಸ್ಮರಣೆಗಾಗಿ "ಡಾ ಎಸ್.ನಿಜಲಿಂಗಪ್ಪ ವೃತ್ತ" ಎಂದು ನಾಮಕರಣ ಮಾಡಲು 28-08-2020 ರಂದು ಸರಕಾರ ಆದೇಶ ಹೊರಡಿಸಿದ್ದರೂ ಇಲ್ಲಿವರೆಗೆ ಉದ್ಘಾಟನಾ ಸಮಾರಂಭ ನಡೆಯದೇ ಇರುವುದರ ಕುರಿತು ಅತ್ಯಂತ ನೋವಿನ ಸಂಗತಿಯಾದ ಬಗ್ಗೆ ಸಭಾಪತಿ ಬಸವರಾಜ ಹೊರಟ್ಟಿಯವರು ಸರಕಾರದ ಗಮನ ಸೆಳೆದಿದ್ದರು.

ಮೇಲಿನ ವಿಷಯದ ಕುರಿತು 20-09-2022 ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಗಮನಸೆಳೆದಿದ್ದರು. ಆದರೂ ಯಾವುದೇ ಪ್ರಗತಿ ನಡೆಯದಾಗಿತ್ತು. ಮತ್ತೆ ಸಭಾಪತಿ ಬಸವರಾಜ ಹೊರಟ್ಟಿಯವರು 31-10-2023 ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಸುಧೀರ್ಘ ಪತ್ರ ಬರೆದು ವಿಷಯದ ತೀವ್ರತೆ ಮತ್ತು ಮಹತ್ವದ ಕುರಿತು ಒತ್ತಾಯಿಸಿದ್ದರು. ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಸರಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ-2 ಮತ್ತು ಸಮನ್ವಯ) ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತರಿಗೆ ಪತ್ರ ಬರೆದು ಡಾ.ಎಸ್.ನಿಜಲಿಂಗಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ "ಡಾ ಎಸ್.ನಿಜಲಿಂಗಪ್ಪ ವೃತ್ತ" ಉದ್ಘಾಟನಾ ಸಮಾರಂಭವನ್ನು ನಿಯಮಾನುಸಾರ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ನಿರ್ದೇಶಿಸಿದ್ದನ್ನು ಆಯುಕ್ತರ ಗಮನಕ್ಕೆ ತಂದಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳು ತಕ್ಷಣ ನನ್ನ ಆಶಯ ಹಾಗೂ ಪತ್ರಕ್ಕೆ ಸ್ಪಂದಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ಸಲ್ಲಿಸಿದ್ದಾರೆ.

# ಡಾ.ಎಸ್.ನಿಜಲಿಂಗಪ್ಪ ವೃತ್ತ ನಾಮಕರಣ ಉದ್ಘಾಟನೆಗೆ ಕ್ರಮ

ಬೆಂಗಳೂರು, ನ.24. ವಿಧಾನಸೌಧದ ಪಶ್ಚಿಮ ಭಾಗದ ಮುಂಭಾಗದ ವೃತ್ತಕ್ಕೆ ಮಾಜಿ ಮುಖ್ಯಮಂತ್ರಿ ಡಾ.ಎಸ್. ನಿಜಲಿಂಗಪ್ಪ ವೃತ್ತ ನಾಮಕರಣ ಉದ್ಘಾಟನಾ ಸಮಾರಂಭವನ್ನು ತಕ್ಷಣ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ನಿರ್ದೇಶನ ನೀಡಿರುವುದನ್ನು ಸಭಾಪತಿ ಬಸವರಾಜ ಹೊರಟ್ಟಿ ಸ್ವಾಗತಿಸಿದ್ದಾರೆ.



ನಾಡು ಕಂಡ ಅಪರೂಪದ ಮುಖ್ಯಮಂತ್ರಿಗಳು ಮುತ್ಸದ್ಧಿ ರಾಜಕಾರಣಿಗಳು ಸರಳ ಸಜ್ಜನಿಕೆಗೆ ಹೆಸರಾದ ಡಾ.ಎಸ್. ನಿಜಲಿಂಗಪ್ಪನವರ ಸೇವೆಯನ್ನು ನಾಡು ಎಂದೂ ಮರೆಯದು. ಇಂತಹ ಮಹನೀಯರ ಹೆಸರು ಚಿರಸ್ಥಾಯಿಯಾಗಿ ಉಳಿಸಲು ಬೆಂಗಳೂರಿನ ಬಿ.ಬಿ.ಎಂ.ಪಿ. ವಾರ್ಡ್‌ನಂ. 110ರ ಸಂಪಂಗಿರಾಮ ನಗರ ವ್ಯಾಪ್ತಿಗೆ ಬರುವ ವಿಧಾನಸೌಧದ ಪಶ್ಚಿಮ ಭಾಗದ ಮುಂಭಾಗದಲ್ಲಿರುವ ವೃತ್ತಕ್ಕೆ ಕರ್ನಾಟಕ ಏಕೀಕರಣ ಶಿಲ್ಪಿ ಮಾಜಿ ಮುಖ್ಯಮಂತ್ರಿ ಡಾ.ಎಸ್. ನಿಜಲಿಂಗಪ್ಪ ಅವರ ಸಂಸ್ಮರಣೆಗಾಗಿ ಡಾ ಎಸ್. ನಿಜಲಿಂಗಪ್ಪ ವೃತ್ತ ಎಂದು ನಾಮಕರಣ ಮಾಡಲು 28-08-2020 ರಂದು ಸರಕಾರ ಆದೇಶ ಹೊರಡಿಸಿದ್ದರೂ ಇಲ್ಲಿವರೆಗೆ ಉದ್ಘಾಟನಾ ಸಮಾರಂಭ ನಡೆಯದೇ ಇರುವುದರ ಕುರಿತು ಅತ್ಯಂತ ನೋವಿನ ಸಂಗತಿಯಾದ ಬಗ್ಗೆ ಸಭಾಪತಿ ಬಸವರಾಜ ಹೊರಟ್ಟಿಯವರು ಸರಕಾರದ ಗಮನ ಸೆಳೆದಿದ್ದರು.

ಈ ಕುರಿತು ಮತ್ತೆ ಸಭಾಪತಿ ಬಸವರಾಜ ಹೊರಟ್ಟಿಯವರು 31-10-2023 ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಸುಧೀರ್ಘ ಪತ್ರ ಬರೆದು ವಿಷಯದ ತೀವ್ರತೆ ಮತ್ತು ಮಹತ್ವದ ಕುರಿತು ಒತ್ತಾಯಿಸಿದ್ದರು. ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಸರಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ-2 ಮತ್ತು ಸಮನ್ವಯ) ಇವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದು ಡಾ.ಎಸ್. ನಿಜಲಿಂಗಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಡಾ.ಎಸ್.ನಿಜಲಿಂಗಪ್ಪ ವೃತ್ತ ಉದ್ಘಾಟನಾ ಸಮಾರಂಭವನ್ನು ನಿಯಮಾನುಸಾರ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ನಿರ್ದೇಶಿಸಿದ್ದನ್ನು ಆಯುಕ್ತರ ಗಮನಕ್ಕೆ ತಂದಿದ್ದಾರೆ.


ಈ ಕುರಿತು ಮುಖ್ಯಮಂತ್ರಿಗಳು ತಕ್ಷಣ ತಮ್ಮ ಆಶಯ ಹಾಗೂ ಪತ್ರಕ್ಕೆ ಸ್ಪಂದಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಕಾರ್ಯವನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ಶ್ಲಾಘಿಸಿದ್ದಾರೆ.

# ಡಾ.ಎಸ್.ನಿಜಲಿಂಗಪ್ಪ ವೃತ್ತ ನಾಮಕರಣ ಉದ್ಘಾಟನೆಗೆ ಮುಖ್ಯಮಂತ್ರಿಗಳ ನಿರ್ದೇಶನ ಹೊರಟ್ಟಿ ಅಭಿನಂದನೆ

**ಗದಗ ಸಂಜೆ ವಾರ್ತೆ :**

ಬೆಂಗಳೂರು : ವಿಳಂಬವಾದ "ಡಾ ಎಸ್.ನಿಜಲಿಂಗಪ್ಪ ವೃತ್ತ" ನಾಮಕರಣ ಉದ್ಘಾಟನಾ ಸಮಾರಂಭವನ್ನು ತಕ್ಷಣ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ನಿರ್ದೇಶನ ನೀಡಿದ್ದಕ್ಕೆ ಸಭಾಪತಿ ಬಸವರಾಜ ಹೊರಟ್ಟಿಯವರು ಅಭಿನಂದನೆ ಸಲ್ಲಿಸಿದ್ದಾರೆ.

ನಾಡು ಕಂಡ ಅಪರೂಪದ ಮುಖ್ಯಮಂತ್ರಿಗಳು ಮತ್ಸದ್ದಿ ರಾಜಕಾರಣಿಗಳು ಸರಳ ಸಜ್ಜನಿಕೆಗೆ ಹೆಸರಾದ ಡಾ.ಎಸ್.ನಿಜಲಿಂಗಪ್ಪನವರ ಸೇವೆಯನ್ನು ನಾಡು ಎಂದೂ ಮರೆಯದು ಇಂತಹ ಮಹನೀಯರ ಹೆಸರು ಚಿರಸ್ಥಾಯಿಯಾಗಿ ಉಳಿಸಲು ಬೆಂಗಳೂರಿನ ಬಿ.ಬಿ.ಎಂ.ಪಿ. ವಾರ್ಡನಂ. 110ರ ಸಂಪಂಗಿರಾಮ ನಗರ ವ್ಯಾಪ್ತಿಗೆ ಬರುವ ವಿಧಾನ ಸೌಧದ ಪಶ್ಚಿಮ ಭಾಗದ ಮುಂಭಾಗದಲ್ಲಿರುವ ವೃತ್ತಕ್ಕೆ ಕರ್ನಾಟಕ ಏಕೀಕರಣ ಶಿಲ್ಪಿ ಮಾಜಿ ಮುಖ್ಯಮಂತ್ರಿ ಡಾ.ಎಸ್.ನಿಜಲಿಂಗಪ್ಪ ಇವರ ಸಂಸ್ಮರಣೆಗಾಗಿ "ಡಾ ಎಸ್.ನಿಜಲಿಂಗಪ್ಪ ವೃತ್ತ" ಎಂದು ನಾಮಕರಣ ಮಾಡಲು 28-08-2020 ರಂದು ಸರಕಾರ



ಆದೇಶ ಹೊರಡಿಸಿದ್ದರೂ ಇಲ್ಲಿವರೆಗೆ ಉದ್ಘಾಟನಾ ಸಮಾರಂಭ ನಡೆಯದೇ ಇರುವುದರ ಕುರಿತು ಅತ್ಯಂತ ನೋವಿನ ಸಂಗತಿಯಾದ ಬಗ್ಗೆ ಸಭಾಪತಿ ಬಸವರಾಜ ಹೊರಟ್ಟಿಯವರು ಸರಕಾರದ ಗಮನ ಸೆಳೆದಿದ್ದರು.

ಮೇಲಿನ ವಿಷಯದ ಕುರಿತು 20-09-2022 ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಗಮನಸೆಳೆದಿದ್ದರು. ಆದರೂ ಯಾವುದೇ ಪ್ರಗತಿ ನಡೆಯದಾಗಿ-ತ್ತು. ಮತ್ತೆ ಸಭಾಪತಿ ಬಸವರಾಜ ಹೊರಟ್ಟಿಯವರು 31-10-2023 ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಸುಧೀರ್ಘ ಪತ್ರ ಬರೆದು ವಿಷಯದ ತೀವ್ರತೆ ಮತ್ತು ಮಹತ್ವದ ಕುರಿತು ಒತ್ತಾಯಿಸಿದ್ದರು. ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಸರಕಾರದ ಆಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ-2 ಮತ್ತು ಸಮನ್ವಯ) ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತರಿಗೆ ಪತ್ರ ಬರೆದು ಡಾ.ಎಸ್.ನಿಜಲಿಂಗಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ "ಡಾ ಎಸ್.ನಿಜಲಿಂಗಪ್ಪ ವೃತ್ತ" ಉದ್ಘಾಟನಾ ಸಮಾರಂಭವನ್ನು ನಿಯಮಾನುಸಾರ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ನಿರ್ದೇಶಿಸಿದ್ದನ್ನು ಆಯುಕ್ತರ ಗಮನಕ್ಕೆ ತಂದಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳು ತಕ್ಷಣ ನನ್ನ ಆಶಯ ಹಾಗೂ ಪತ್ರಕ್ಕೆ ಸ್ಪಂದಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ಸಲ್ಲಿಸಿದ್ದಾರೆ.